ಓ.ಎಸ್ ನಂಃ 158/2015

ಡಿ .ಡಬ್ಲು-1

ಸಾಕ್ಷಿಯನ್ನು ದಿನಾಂಕಃ 11.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ವಾದಿ ಪರ ಶ್ರೀ. ಎಂ ಬಿ ಅರ್ ವಕೀಲರಿಂದ**

ಸಂಗೊಂಡಹಳ್ಳಿ ಗ್ರಾಮದ ಸರ್ವೆ ನಂ 60 ರಲ್ಲಿ ನನಗೆ ಸೇರಿದ ಎಷ್ಟು ಜಮೀನು ಇತ್ತು ಎಂದರೆ 4 ಎಕರೆ ಇತ್ತು. ಸದರಿ ಸರ್ವೆ ನಂಬರಿನಲ್ಲಿ 4 ಎಕರೆ ಇರಲಿಲ್ಲ , ಕೇವಲ 2 ಎಕರೆ ನಿಪಿ 16 ರಂತೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 16 ರಂತೆ ನನ್ನ ಹೆಸರಿಗೆ 2 ಎಕರೆ ಮಜೂರಾಗಿದೆ ಎಂದರೆ ಸರಿ . ಸದರಿ ಜಮೀನು ಯಾವಾಗ ಮಂಜೂರಾಗಿರುತ್ತದೆ ಎಂದರೆ 1992-93 ರಲ್ಲಿ ಮಂಜೂರಾಗಿರುತ್ತದೆ. ಸದರಿ ಜಮೀನು 1995 ರಲ್ಲಿ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರಿನಲ್ಲಿ ನಿಮ್ಮ ತಂದೆ ಎಷ್ಟು ವರುಷಗಳಿಂದ ಸ್ವಾಧೀನದಲ್ಲಿದ್ದರು ಎಂದರೆ 1978-79 ರಿಂದ ಇದ್ದರು. ನಿಮ್ಮ ತಂದೆ ಪೌತಿಯಾಗಿ ಎಷ್ಟು ವರುಷಗಳಾಗಿರುತ್ತದೆ ಎಂದರೆ 1998 ರಲ್ಲಿ ಮೃತಪಟ್ಟಿರುತ್ತಾರೆ . ನನ್ನ ತಂದೆ ಸದರಿ ಸರ್ವೆ ನಂ 60 ರಲ್ಲಿ ಕೇವಲ 2 ಎಕರೆಯಲ್ಲಿ ಮಾತ್ರ ಅನಧಿಕೃತ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. 1995 ರಲ್ಲಿ ನಿಮ್ಮ ತಂದೆ ಜೀವಂತವಿರುವಾಗಲೇ ಅರ್ಜಿ ನೀಡಿ ನನ್ನ ಹೆಸರಿಗೆ ಮಂಜೂರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮಂಜೂರಾದ ಸಮಯದಲ್ಲೂ ಸಹ ಸರ್ವೆ ನಂ 60 ಅಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನೇ ಸ್ವಾಧೀನದಲ್ಲಿ ಇದ್ದೇ ಎಂದು ನುಡಿಯುತ್ತಾರೆ.

ನಿಮಗೆ ಮಂಜೂರಾದ ನಂತರ ದುರಸ್ತಿ ಮಾಡಿಸಿರುತ್ತೀರಾ ಎಂದರೆ ದುರಸ್ತಿ ಮಾಡಿಸಿ ಮಾರಾಟ ಮಾಡಿರುತ್ತೇನೆ. ಸರ್ವೆ ನಂ 60 ಪಿ ಇದ್ದಾಗಲೇ ದಿನಾಂಕ 02.09.1996 ರಲ್ಲಿ ಕ್ರಯದ ಕರಾರು ಪತ್ರದ ಮೂಲಕ ಬೊಮ್ಮಸಂದ್ರ ಗ್ರಾಮ ಡಿ ಕೆ ನಾರಾಯಾಣಸ್ವಾಮಿ ರವರಿಗೆ ನಿಪಿ 10 ರಂತೆ ಮಾರಾಟ ಮಾಡಿರುತ್ತೀರಿ ಎಂದರೆ ಸರಿ . ಸದರಿ ನಿಪಿ 10 ಮಾಡಿಕೊಟ್ಟದ್ದರೂ ಸಹ ಸಹಿತ 2010 ರವರೆಗೆ ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ . 2009 ರಲ್ಲಿ ಸರ್ವೆ ನಂ 60 ನ್ನು ದುರಸ್ತಿ ಮಾಡಿಸಿ ಹೊಸ ಸರ್ವೆ ನಂ 144 ಎಂದು ಮಾಡಿಸಿರುತ್ತೇನೆ ಎಂದರೆ ಸರಿ . ನಂತರ ದಿನಾಂಕ 20.09.2010 ರಲ್ಲಿ ಇದೇ ಸ್ವತ್ತನ್ನು ಎಡಹಳ್ಳಿ ಗ್ರಾಮದ ಹನುಮಪ್ಪ ರವರ ಮಗ ರಾಜಣ್ಣ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ . ಕ್ರಯದ ಕಾರಾರು ಪತ್ರ ಮಾಡಿಕೊಟ್ಟಿದ್ದ ಬೊಮ್ಮಸಂದ್ರ ಗ್ರಾಮದ ಡಿ ಕೆ ನಾರಾಯಣಸ್ವಾಮಿಗೆ ಕ್ರಯ ಪತ್ರ ಮಾಡಿಕೊಟ್ಟಿಲ್ಲ ಎಂದರೆ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದೆ. ಅಸಲು ದಾವಾ

ಸಂ 237/2010 ರಂತೆ ಕ್ರಯ ಪತ್ರ ಮಾಡಿಕೊಡಬೇಕೆಂದು ಡಿ ಕೆ ನಾರಾಯಣಸ್ವಾಮಿ ದಾವೆ ಹೂಡಿರುತ್ತಾರೆ ಎಂದರೆ ಸರಿ . ಸದರಿ ದಾವೆಯಲ್ಲಿ ರಾಜಣ್ಣ ರವರನ್ನು ಸಹ ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ . ಸದರಿ ದಾವೆ ಡಿ ಕೆ ನಾರಾಯಣಸ್ವಾಮಿ ಪರವಾಗಿ ಯಾವಾಗ ತೀರ್ಪು ಅಗಿರುತ್ತದೆ ಎಂದರೆ ಇನ್ನೂ ಚಾಲ್ತಿಯಲ್ಲಿದೆ. ಸದರಿ ದಾವಾ ದಿನಾಂಕ 05.06.2013 ರಂದು ಡಿ ಕೆ ನಾರಾಯಣಸ್ವಾಮಿ ಪರವಾಗಿ ನಿಪಿ 20 ರಂತೆ ಅದೇಶ ವಾಗಿರುತ್ತದೆ ಎಂದರೆ ಗೊತ್ತಿಲ್ಲ. ಮುಂದುವರೆದು ಚಾಲ್ತಿಯಲ್ಲಿದೆ ಎಂದು ನುಡಿಯುತ್ತಾರೆ. ನಾನು ಮೇಲ್ಮನಮಿ ಸಲ್ಲಿಸಿದ್ದು ಅದು ವಜಾ ಗೊಂಡ ನಂತರ ನ್ಯಾಯಾಲಯದ ಮೂಲಕ ನಾರಾಯಣಸ್ವಾಮಿ ರವರಿಗೆ ಕ್ರಯ ಪತ್ರ ಅಗಿರುತ್ತದೆ ಅವರೇ ಸ್ವಾಧಿನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಸಂಗೊಂಡಹಳ್ಳಿ ಗ್ರಾಮದ ಸರ್ವೆ ನಂ 60 ರಲ್ಲಿ ನಿಮಗೆ ಈಗ ಯಾವುದೇ ಜಮೀನು ಇಲ್ಲ ಹಾಗೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 1995 ರಿಂದ ಇಲ್ಲಿಯವರೆಗೂ ನನಗೆ ಹೊಸ ಸರ್ವೆ ನಂ 144 ( ಹಳೇ ಸರ್ವೆ ನಂ 60 ) ರಲ್ಲಿ ಯಾವುದೇ ಜಮೀನು ಹಾಗೂ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ನನಗೆ ಕೀಲಾಗಾಣಿಹಳ್ಳಿ ಯಲ್ಲಿ ಸರ್ವೆ ನಂ 60 ರಲ್ಲಿ ಜಮೀನು ಇದ್ದು ಸಂಗೊಂಡಹಳ್ಳಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 03.03.2002 ರಲ್ಲಿ ನಾರಾಯಣಪ್ಪ ರವರ ಹೆಂಡತಿ ಶಾಂತಮ್ಮ ರವರು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ ವಾದಿ ಹಾಗೂ ಅವರ ಕುಟುಂಬದವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಗೊಂಡಹಳ್ಳಿ ಗ್ರಾಮದ ಹೊಸ ಸರ್ವೆ ನಂ 144 ( ಹಳೇ ಸರ್ವೆ ನಂ 60 ಪಿ 19 ) ರ 2 ಗುಂಟೆಯಲ್ಲಿ ಯಾವುದೇ ಸಂಬಂದವಿಲ್ಲ ಹಾಗೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಕರಾರು ಹಾಗೂ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ ಇದೆ,**

ಸಹಿ/-

(ಹರೀಶ್. ಜಿ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಜೆಎಂಎಫ್ ಸಿ, ಮುಳಬಾಗಿಲು